

ಈ ಗಣಿತ ಲ್ಯಾಬ್‌ನಲ್ಲಿ ಕಲಿಯುವುದೆಂದರೆ ಮಕ್ಕಳಿಗೆ ಅಂಗಳದಲ್ಲಿ ಆಡಿದಂತೆ

ಎದುರು ಒಂದೇ ದಿನ ನಾಲ್ಕೈದು ಬಸ್ಸುಗಳು ನಿಂತಿದ್ದೂ ಉಂಟು. ಹಾಗೆ ಬರುವ ಮಕ್ಕಳಿಗೆ, ಹಿರಿಯರಿಗೆ, ಪ್ರಯೋಗಾಲಯದ ಮಹತ್ವವನ್ನು, ಅಲ್ಲಿ ಅಳವಡಿಸಿರುವ ಸಾಫ್ಟ್‌ವೇರ್‌ಗಳ ವಿಶೇಷವನ್ನು,ಅವು ಕಾರ್ಯ ನಿರ್ವಹಿಸುವ ವಿಧಾನ ಮತ್ತು ಗಣಿತದ ಮಾದರಿಗಳ ಕುರಿತು ಮಕ್ಕಳೇ ವಿವರಿಸುತ್ತಾರೆ.

ಜರ್ಮನಿಯ 'ಐರಿಸ್ ಡಿವೈಸ್' ಅನ್ನು ನಡ ಶಾಲೆಯ ಪ್ರಯೋಗಾಲಯದಲ್ಲಿ ಅಳವಡಿಸಲಾಗಿದೆ. ಲೆಕ್ಕದ ಸಮೀಕರಣಗಳನ್ನು, ಪ್ರಮೇಯಗಳನ್ನು ದೈನಂದಿನ ಬದುಕಿಗೆ ಅಳವಡಿಸುವಂತಹ ಮಾದರಿಗಳು, ಕಥೆಗಳನ್ನು ಹೇಳುವ ಸಾಫ್ಟ್‌ವೇರ್ ಕೂಡ ಲ್ಯಾಬ್‌ನಲ್ಲಿದೆ.

ರಾಜ್ಯದ ವಿವಿಧೆಡೆಯಿಂದ ಈವರೆಗೆ ಸುಮಾರು 30 ಸಾವಿರ ಮಕ್ಕಳು ಪ್ರಯೋಗಾಲಯ ವೀಕ್ಷಿಸಲು ಬಂದಿದ್ದಾರೆ. ನಾಲ್ಕು ಸಾವಿರಕ್ಕೂ ಹೆಚ್ಚು ಶಿಕ್ಷಕರು ಭೇಟಿ ನೀಡಿದ್ದಾರೆ. ಇದೇ ಪ್ರಯೋಗಾಲಯವನ್ನು ನೋಡಿ ಸ್ಫೂರ್ತಿ ಪಡೆದು ರಾಜ್ಯದ ಸುಮಾರು 50 ಶಾಲೆಗಳಲ್ಲಿ ಶಿಕ್ಷಕರು ತಾವೂ ತಮ್ಮ ಕೈಲಾದಷ್ಟು ಶ್ರಮ ಹಾಕಿ ಗಣಿತ ಪ್ರಯೋಗಾಲಯವನ್ನು ಮಾಡಿದ್ದಾರೆ. ಒಳ್ಳೆಯ ಕೆಲಸಗಳೆಂದರೆ ಸುಗಂಧ ದ್ರವ್ಯದಂತೆ; ಅದರ ಪರಿಮಳ ಎಲ್ಲೆಡೆ ಹರಡುತ್ತದೆ.

## ಅಭಿವೃದ್ಧಿಗೊಂದು ಮಾದರಿ

ತಮ್ಮ ಶಾಲೆಯಲ್ಲಿ ಮಕ್ಕಳ ವಿಕಸನಕ್ಕೆ ಸಾಕಷ್ಟು ಪೂರಕ ಚಟುವಟಿಕೆಗಳು ನಡೆಯುತ್ತಿರುವುದು ಮುಖ್ಯೋಪಾಧ್ಯಾಯಿನಿ ಶರ್ಮಿಳಾ ಬಿ. ಅವರಿಗೆ ಖುಷಿ ತಂದಿದೆ. ಅಂದಹಾಗೆ, ಗಣಿತದ ಪ್ರಯೋಗಾಲಯದ ಯಶಸ್ಸಿನಿಂದ ಪ್ರೇರಿತರಾಗಿ, ಹಿಂದಿ ಶಿಕ್ಷಕ ಮೋಹನ್ ಬಾಬು ಅವರು, 'ಹಿಂದಿ ಸ್ಮಾರ್ಟ್ ಕ್ಲಾಸ್' ರೂಪಿಸಿದ್ದಾರೆ.

ಶಾಲೆಯಲ್ಲಿ ಜೇನು ಸಾಕಣೆ ಮಾಡಿರುವ ಮಕ್ಕಳು, ಪಾಠದಲ್ಲಿ ಬರುವ ಜೇನುಹುಳುಗಳ ಸ್ವಭಾವವನ್ನು ತಾವೇ ಕುತೂಹಲದಿಂದ ಗಮನಿಸಿದ್ದಾರೆ. ಸಾವಯವ ಕೃಷಿ ಮೂಲಕ ವರ್ಷಕ್ಕೆ 20 ಕ್ವಿಂಟಾಲ್ ತರಕಾರಿ ಬೆಳೆದಿದ್ದಾರೆ. ಹಾಗಲದ ಬಳ್ಳಿ, ಬದನೆಯ ಗಿಡ, ಅರಿಶಿಣ ಬೇರು



ಯಾಕೂಬ್ ಕೊಯ್ಯೂರು

ಹೀಗೆ ಸಸ್ಯ ಲೋಕದ ವೈವಿಧ್ಯವನ್ನು ಮಕ್ಕಳೇ ಗಮನಿಸುವ ಅವಕಾಶವನ್ನು ಈ ಶಾಲೆ ಕಲ್ಪಿಸಿದೆ. ಈ ಎಲ್ಲ ಚಟುವಟಿಕೆಯಿಂದಾಗಿ ಶಾಲೆಯಲ್ಲಿ ಮಕ್ಕಳ ಸಂಖ್ಯೆಯೂ ಹೆಚ್ಚಾಗಿದೆ.

ಸಾಮಾಜಿಕ ಅರಣ್ಯ ಇಲಾಖೆಯ ಧನ ಸಹಾಯದೊಂದಿಗೆ, ಸುಮಾರು ಒಂದು ಎಕರೆ ಪ್ರದೇಶದಲ್ಲಿ 'ಆಯುರ್ವೇದ ವನ'ವನ್ನು ಶಿಕ್ಷಕ ವರ್ಗ ಮತ್ತು ಮಕ್ಕಳು ಸೇರಿಕೊಂಡು ಮಾಡಿದ್ದಾರೆ. ಸುಮಾರು 120 ಔಷಧೀಯ ಗಿಡಗಳನ್ನು ಬೆಳೆಸಿದ್ದು, ವಿದ್ಯಾರ್ಥಿಗಳ ಗುಂಪುಗಳನ್ನು ರಚಿಸಿ, ಗಿಡಗಳ ಕಾಳಜಿ ಮಾಡುವ ಜವಾಬ್ದಾರಿಯನ್ನು ಅವರಿಗೆ ವಹಿಸಲಾಗಿದೆ. ನವಗ್ರಹ ವನದ ಉಸ್ತುವಾರಿ ಒಂದು ತಂಡಕ್ಕಾದರೆ, ಸಸ್ಯಕಾಶಿಯ ಜವಾಬ್ದಾರಿ ಮತ್ತೊಂದು ತಂಡಕ್ಕೆ. ಶಾಲೆಯಲ್ಲಿ ತಮಗೊಂದು ಜವಾಬ್ದಾರಿ ದೊರೆತಿದೆ ಎಂಬ ಹುರುಪು ಮಕ್ಕಳದು.

ಸರ್ಕಾರಿ ಶಾಲೆಗಳಲ್ಲಿ ಅಪರೂಪ ಎನಿಸುವ ಬ್ಯಾಂಡ್ ಸೆಟ್ ಕೂಡ ಶಾಲೆಯಲ್ಲಿದೆ. ಸಮವಸ್ತ್ರ ಧರಿಸಿದ ವಿದ್ಯಾರ್ಥಿಗಳ ತಂಡ ಲಯಬದ್ಧವಾಗಿ ಬ್ಯಾಂಡ್ ನುಡಿಸುವುದನ್ನು ನೋಡುವುದೇ ಚಂದ. ಮಕ್ಕಳ ಸರ್ವತೋಮುಖ ಬೆಳವಣಿಗೆಯ ಕೇಂದ್ರದ ಉದಾಹರಣೆಯಂತೆ ಈ ಶಾಲೆ ಕಾಣಿಸುತ್ತದೆ.

**ಮೇಷ್ಟ್ರು ತಮ್ಮ ಕನಸನ್ನು ಹಿಂಬಾಲಿಸಿದರು, ರಾಷ್ಟ್ರಪ್ರಶಸ್ತಿ ಅವರನ್ನು ಹಿಂಬಾಲಿಸಿತು**

'ಪ್ರಸ್ತುತ ಕೋವಿಡ್ ದೆಸೆಯಿಂದ ಇದೀಗ ಇಡೀ ವನ ಪಾಳುಬಿದ್ದಂತಾಗಿದೆ. ಮಕ್ಕಳ ಆರೈಕೆ ಇಲ್ಲದೆ ಗಿಡಗಳಲ್ಲಿ ಕೆಲವು ಸೊರಗಿವೆ, ಮತ್ತೆ ಕೆಲವು ಯದ್ವಾತದ್ವಾ ಬೆಳೆದಿವೆ. ಹುಲ್ಲುಕಂಟಿ ಪೊದೆಗಳು ಎದೆಯೆತ್ತರ ನಿಂತಿವೆ' ಎನ್ನುವ ಯಾಕೂಬ್ ಮೇಷ್ಟ್ರ ಬೇಸರ. ಗಣಿತ ಪ್ರಯೋಗಾಲಯದಲ್ಲಿ ಮಕ್ಕಳ ಕಲರವ ಇಲ್ಲದೆ, ಬಹಳ ನೋವಾಗುತ್ತದೆ ಎನ್ನುತ್ತಾರೆ.

ಯಾಕೂಬ್ ಅವರ ಕನಸು ಇಷ್ಟಕ್ಕೇ ನಿಂತಿಲ್ಲ. ಪ್ರಯೋಗಾಲಯದಲ್ಲಿ ಇನ್ನೂ ಹೆಚ್ಚಿನ ಮಾದರಿಗಳನ್ನು ಅಳವಡಿಸಬೇಕು ಎಂಬ ಕನಸು ಅವರದು. ಅದಕ್ಕಾಗಿ ಇನ್ನಷ್ಟು ನಿಧಿ ಸಂಗ್ರಹಿಸಿ, ಮಾದರಿಗಳನ್ನು ಗುರುತಿಸುವ ಯೋಚನೆ ಅವರಿಗಿದೆ.

ಯಾಕೂಬ್ ಮಾಷ್ಟ್ರ ಮಗಳು ಹಮ್ನಾ ಜಲ್ಜೀಲ ವೈದ್ಯಕೀಯ ಪದವಿ ಓದುತ್ತಿದ್ದಾರೆ. ಮಗ ನಿಹಾಲ್ ಯೂಸುಫ್ ಈಗಿನ್ನೂ ಎಂಟನೇ ತರಗತಿ. ಪತ್ನಿ ಜಮೀಲಾ ಮೇಷ್ಟ್ರ ಚಟುವಟಿಕೆಗಳಿಗೆಲ್ಲ ಅಂತರ್ಜಲವಿದ್ದಂತೆ.

'ನಾವೆಲ್ಲ ಶಾಲೆಗೆ ಹೋಗುವಾಗ ಕಂಪ್ಯೂಟರ್ ಎಂದರೆ ಏನೆಂದೇ ಗೊತ್ತಿರಲಿಲ್ಲ. ನಂತರದ ದಿನಗಳಲ್ಲಿ ನಾನೇ ಕಂಪ್ಯೂಟರ್ ನಿರ್ವಹಣೆಯನ್ನು ಕಲಿತುಕೊಂಡೆ. ಹಾಗಾಗಿ ಸ್ಮಾರ್ಟ್ ಕ್ಲಾಸ್‌ಗಳು ಸುಲಭವಾದವು. ಈಗ ಗಣಿತ ಕಲಿಕೆಯನ್ನು ಸುಲಭವಾಗಿಸುವುದು ಹೇಗೆ ಎಂಬ ಬಗ್ಗೆ 150ಕ್ಕೂ ಹೆಚ್ಚು ಸರಣಿ ವಿಡಿಯೊಗಳನ್ನು ಮಾಡಿ ಯುಟ್ಯೂಬ್‌ಗೆ ಅಪ್‌ಲೋಡ್ ಮಾಡಿದ್ದೇನೆ' ಎನ್ನುವ ಯಾಕೂಬ್ ಅವರಲ್ಲಿ ನಿರಂತರ ಹಸಿವಿನ ಓರ್ವ ವಿದ್ಯಾರ್ಥಿಯೂ ಇದ್ದಾನೆ. ಹೊಸದನ್ನು ಕಲಿಯುವ ಆಸಕ್ತಿ ಅವರಲ್ಲಿದೆ. ಹೊಸತರ ಹಂಬಲವೇ ಅವರ ಬದುಕಿನ ಯಶಸ್ಸಿನ ಸೂತ್ರ ಅನ್ನಿಸುತ್ತದೆ.

ಪ್ರತಿಕ್ರಿಯಿಸಿ: feedback@sudha.co.in